**ಅಧಿಸೂಚನೆ**

**ಸಂಖ್ಯೆ :ಸಂವ್ಯಶಾಇ 24 ರಾಶಾಪ್ರ 2008, ಬೆಂಗಳೂರು, ದಿನಾಂಕ: 25ನೇ ಏಪ್ರಿಲ್ 2008**

The Dowry Prohibition (Karnataka) Rules, 2004 ಇದರ ಅಧಿಕೃತ ಕನ್ನಡ ಭಾಷಾಂತರವನ್ನು ಕರ್ನಾಟಕ ಅಫಿಷಿಯಲ್ ಲಾಂಗ್ವೇಜ್ ಆಕ್ಟ್, 1963ರ ಪ್ರಕರಣ 5A ಅಡಿಯಲ್ಲಿ ರಾಜ್ಯಪಾಲರ ಅಧಿಕಾರದ ಮೇರೆಗೆ ಸಾರ್ವಜನಿಕರ ಮಾಹಿತಿಗಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಮರು ಪ್ರಕಟಿಸಲು ಆದೇಶಿಸಲಾಗಿದೆ.

**ವಧು-ವರದಕ್ಷಿಣೆ ನಿಷೇಧ (ಕರ್ನಾಟಕ) ನಿಯಮಗಳು, 2004**

**ಪ್ರಕರಣಗಳ ಅನುಕ್ರಮಣಿಕೆ**

**ನಿಯಮಗಳು:**


1 ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ

2 ಪರಿಭಾಷೆಗಳು

3 ವಧು-ವರದಕ್ಷಿಣೆ ನಿಷೇಧ ಅಧಿಕಾರಿಯ ಅಧಿಕಾರ ವ್ಯಾಪ್ತಿ

4 ದೂರು

5 ವಧು - ವರದಕ್ಷಿಣೆ ನಿಷೇಧ ಅಧಿಕಾರಿಯು ನಿರ್ವಹಿಸಬೇಕಾದ ಹೆಚ್ಚುವರಿ ಪ್ರಕಾರ್ಯಗಳು

6 ಮುಖ್ಯ ವಧು - ವರದಕ್ಷಿಣೆ ನಿಷೇಧ ಅಧಿಕಾರಿಯ ನೇಮಕಾತಿ ವಿಧಾನ, ಆತನ ಕರ್ತವ್ಯಗಳು ಮತ್ತು ಪ್ರಕಾರ್ಯಗಳು

7 ವಿವಾಹದ ಪಕ್ಷಕಾರರು ಉಡುಗೊರೆಗಳ ಪಟ್ಟಿಯನ್ನು ಸಲ್ಲಿಸುವುದು

8 ಅಪರಾಧಿಗಳ ಪ್ರಾಸಿಕ್ಯೂಷನ್ನಿಗಾಗಿ ಕಾರ್ಯವಿಧಾನ

9 ಕ್ಷೇಮಾಭಿವೃದ್ಧಿ ಸಂಸ್ಥೆಗಳಿಗೆ ಮಾನ್ಯತೆ ನೀಡುವುದು

10 ಯಾವ ಮಿತಿಗಳು ಮತ್ತು ಷರತ್ತುಗಳಿಗೆ ಒಳಪಟ್ಟು ವಧು - ವರದಕ್ಷಿಣೆ ನಿಷೇಧ ಅಧಿಕಾರಿಯು ಪೊಲೀಸು ಅಧಿಕಾರಿಯ ಅಧಿಕಾರಗಳನ್ನು ಚಲಾಯಿಸಬಹುದೋ ಆ ಮಿತಿಗಳು ಮತ್ತು ಷರತ್ತುಗಳು

11 ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ

12 ಅರ್ಥ ವಿವರಣೆ

13 ನಿರಸನ ಮತ್ತು ಉಳಿಸುವಿಕೆಗಳು

**ನಮೂನೆಗಳು.**


**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ ಡಬ್ಲ್ಯೂಸಿಡಿ 39 ಎಸ್‌ಡಬ್ಲ್ಯೂಡಬ್ಲ್ಯೂ, 2004, ಬೆಂಗಳೂರು, ದಿನಾಂಕ 31ನೇ ಮಾರ್ಚ್, 2004**

ವಧು - ವರದಕ್ಷಿಣೆ ನಿಷೇಧ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 28) 8-ಬಿ ಪ್ರಕರಣದೊಂದಿಗೆ ಓದಲಾದ, 10ನೇ ಪ್ರಕರಣದ (1)ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

**1. ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ವಧು ವರದಕ್ಷಿಣೆ ನಿಷೇಧ (ಕರ್ನಾಟಕ) ನಿಯಮಗಳು, 2004 ಎಂದು ಕರೆಯತಕ್ಕದ್ದು.

(2) ಇವು, ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗತಕ್ಕದ್ದು.

(3) ಅವು, ಸರ್ಕಾರಿ ರಾಜ್ಯಪತ್ರದಲ್ಲಿ ಆವುಗಳನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಧಿನಿಯಮ" ಎಂದರೆ, ವಧು ವರದಕ್ಷಿಣೆ ನಿಷೇಧ ಅಧಿನಿಯಮ, 1961 (1961ರ ಕೇಂದ್ರ ಅಧಿನಿಯಮ, 28) ಎಂದು ಅರ್ಥ;

(ಬಿ) "ಸಲಹಾ ಮಂಡಳಿ" ಎಂದರೆ, ಈ ಅಧಿನಿಯಮದ 8-ಬಿ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಸಲಹಾ ಮಂಡಳಿ ಎಂದು ಅರ್ಥ;

(ಸಿ) "ಮುಖ್ಯ ವಧು ವರದಕ್ಷಿಣೆ ನಿಷೇಧ ಅಧಿಕಾರಿ" ಎಂದರೆ, 6ನೇ ನಿಯಮದ ಮೇರೆಗೆ ಹೆಸರಿಸಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕ ಎಂದು ಅರ್ಥ;

(ಡಿ) "ಜಿಲ್ಲಾ ದಂಡಾಧಿಕಾರಿ" ಮತ್ತು "ಫಿರ್ಯಾದು" ಪದಗಳು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಅವುಗಳಿಗೆ ನೀಡಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು ;

(ಇ) "ವಧು ವರದಕ್ಷಿಣೆ ನಿಷೇಧ ಅಧಿಕಾರಿ" ಎಂದರೆ, ಈ ಅಧಿನಿಯಮದ 8–ಬಿ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರದಿಂದ ನೇಮಕಗೊಂಡ ಅಧಿಕಾರಿ ಎಂದು ಅರ್ಥ;

(ಎಫ್) "ನಮೂನೆ" ಎಂದರೆ, ಈ ನಿಯಮಗಳಿಗೆ ಲಗತ್ತಿಸಲಾಗಿರುವ ನಮೂನೆ ಎಂದು ಅರ್ಥ;

(ಜಿ) "ಮಾನ್ಯತೆ ಪಡೆದ ಕ್ಷೇಮಾಭಿವೃದ್ಧಿ ಸಂಸ್ಥೆ ಅಥವಾ ಸಂಘಟನೆ" ಎಂದರೆ, ಈ ಅಧಿನಿಯಮದ 7ನೇ ಪ್ರಕರಣದ (i)ನೇ ಉಪಪ್ರಕರಣದ (ಬಿ) ಖಂಡದ (ii)ನೇ ಉಪಖಂಡದ ಮೇರೆಗೆ ಹಾಗೆಂದು ಮಾನ್ಯತೆ ಪಡೆದ ಸಂಸ್ಥೆ ಅಥವಾ ಸಂಘಟನೆ ಎಂದು ಅರ್ಥ;

(ಹೆಚ್) "ಪ್ರಕರಣ" ಎಂದರೆ, ಈ ಅಧಿನಿಯಮದ ಪ್ರಕರಣ ಎಂದು ಅರ್ಥ;

(ಐ) "ಪರಿವೀಕ್ಷಣಾಧಿಕಾರಿ" ಎಂದರೆ, ಅಪರಾಧಿಗಳ ಪರಿವೀಕ್ಷಣೆ ಅಧಿನಿಯಮ, 1958 (1958ರ ಕೇಂದ್ರ ಅಧಿನಿಯಮ, 20)ರ ಮೇರೆಗೆ ಹಾಗೆಂದು ನೇಮಕಗೊಂಡ ಪರಿವೀಕ್ಷಣಾಧಿಕಾರಿ ಎಂದು ಅರ್ಥ;

(ಜೆ) "ಪೊಲೀಸು ಅಧಿಕಾರಿ" ಎಂದರೆ, ರಾಜ್ಯ ಪೊಲೀಸು ಇಲಾಖೆಯ ಅಧಿಕಾರಿ ಎಂದು ಅರ್ಥ;

(ಕೆ) ಈ ನಿಯಮಗಳಲ್ಲಿ ಬಳಸಲಾದ ಆದರೆ ಪರಿಭಾಷಿಸಿಲ್ಲದ ಪದಗಳು ಮತ್ತು ಪದಾವಳಿಗಳು, ಅಧಿನಿಯಮದಲ್ಲಿ ಅನುಕ್ರಮವಾಗಿ ಅವುಗಳಿಗೆ ನೀಡಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**3. ವಧು – ವರದಕ್ಷಿಣೆ ನಿಷೇಧ ಅಧಿಕಾರಿಯ ಅಧಿಕಾರ ವ್ಯಾಪ್ತಿ.–** ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ/ ಸಹಾಯಕ ನಿರ್ದೇಶಕರನ್ನು ವಧು ವರದಕ್ಷಿಣೆ ನಿಷೇಧ ಅಧಿಕಾರಿಯನ್ನಾಗಿ ನೇಮಕ ಮಾಡುತ್ತದೆ. ಹೆಚ್ಚುವರಿ ವಧು ವರದಕ್ಷಿಣೆ ನಿಷೇಧ ಅಧಿಕಾರಿಗಳನ್ನು ಸರ್ಕಾರವು ಅಧಿಸೂಚನೆಯ ಮೂಲಕ ನೇಮಕ ಮಾಡತಕ್ಕದ್ದು. ವಧು ವರದಕ್ಷಿಣೆ ನಿಷೇಧ ಅಧಿಕಾರಿಗಳು ಮತ್ತು ಹೆಚ್ಚುವರಿ ವಧು ವರದಕ್ಷಿಣೆ ನಿಷೇಧ ಅಧಿಕಾರಿಗಳು ತಮಗೆ ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯೊಳಗೆ ಈ ಅಧಿನಿಯಮದ ಮೇರೆಗೆ ಅಧಿಕಾರವನ್ನು ಚಲಾಯಿಸತಕ್ಕದ್ದು.

**4. ದೂರು.–** ಯಾರೇ ಬಾಧಿತ ವ್ಯಕ್ತಿಯು ಅಥವಾ ಅಂಥ ವ್ಯಕ್ತಿಯ ತಂದೆ–ತಾಯಿ ಅಥವಾ ಸಂಬಂಧಿಯು ಅಥವಾ ಮಾನ್ಯತೆ ಪಡೆದ ಯಾವುದೇ ಕ್ಷೇಮಾಭಿವೃದ್ಧಿ ಸಂಸ್ಥೆಯು ಅಥವಾ ಸಂಘಟನೆಯು, ಖುದ್ದಾಗಿ ಅಥವಾ ದೂತನ ಅಥವಾ ಯಥೋಚಿತವಾಗಿ ಅಧಿಕೃತಗೊಳಿಸಿದ ಏಜೆಂಟನ ಮೂಲಕ ಅಥವಾ ನೋಂದಾಯಿತ ಅಂಚೆಯ ಮೂಲಕ ವಧು ವರದಕ್ಷಿಣೆ ನಿಷೇಧ ಅಧಿಕಾರಿಗೆ ಲಿಖಿತ ದೂರನ್ನು ಸಲ್ಲಿಸಬಹುದು.

**5. ವಧು–ವರದಕ್ಷಿಣೆ ನಿಷೇಧ ಅಧಿಕಾರಿಯು ನಿರ್ವಹಿಸಬೇಕಾದ ಹೆಚ್ಚುವರಿ ಪ್ರಕಾರ್ಯಗಳು.–** ವಧು ವರದಕ್ಷಿಣೆ ನಿಷೇಧ ಅಧಿಕಾರಿಯು ಈ ಕೆಳಕಂಡ ಹೆಚ್ಚುವರಿ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ,–

(i) ಅವನು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಸಂಘಟಿಸಿದ ಶಿಬಿರಗಳಲ್ಲಿ ಮತ್ತು ಪಂಚಾಯಿತಿಗಳು, ನಗರ ಸ್ಥಳೀಯ ಸಂಸ್ಥೆಗಳ ಸಹಾಯದೊಂದಿಗೆ ಶಿಬಿರಗಳನ್ನು ಸಂಘಟಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಹಾಗೂ ವಧು ವರದಕ್ಷಿಣೆ ಕೊಡುವುದರ ಅಥವಾ ತೆಗೆದುಕೊಳ್ಳುವುದರ ವಿರುದ್ಧ ಸಾರ್ವಜನಿಕ ಅಭಿಪ್ರಾಯ ರೂಪಿಸುವ ಹಾಗೂ ವಧು ವರದಕ್ಷಿಣೆ ಕೊಡುವುದನ್ನು ಅಥವಾ ತೆಗೆದುಕೊಳ್ಳುವುದನ್ನು ತಡೆಯುವಲ್ಲಿ, ಸ್ಥಳೀಯ ಜನರು ಪಾಲ್ಗೊಳ್ಳುವಂತೆ ಮಾಡುವ ಪ್ರಯತ್ನವನ್ನು ಮಾಡತಕ್ಕದ್ದು.

(ii) ಅವನು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳ ಯಾವುದೇ ಉಲ್ಲಂಘನೆಯಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಅನಿರೀಕ್ಷಿತ ತನಿಖೆಗಳನ್ನು ಮತ್ತು ವಿವೇಚನಾಯುತವಾದ ವಿಚಾರಣೆಗಳನ್ನು ನಡೆಸತಕ್ಕದ್ದು.

(iii) ಅವನು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಎಸಗಿದ ಯಾವುದೇ ಅಪರಾಧದ ಬಗ್ಗೆ, ಬಾಧಿತ ಪಕ್ಷಕಾರನಿಂದ ಅಥವಾ ವ್ಯಕ್ತಿಯಿಂದ ಅಥವಾ ಯಾರೇ ಇತರ ವ್ಯಕ್ತಿಗಳಿಂದ ಅಥವಾ ಸಂಘಟನೆಯಿಂದ ದೂರುಗಳನ್ನು ಸ್ವೀಕರಿಸತಕ್ಕದ್ದು.

(iv) ಅವನು, ನಮೂನೆ–I ರಲ್ಲಿ ಎಲ್ಲ ದೂರುಗಳು, ವಿಚಾರಣೆಗಳು ಮತ್ತು ಅವುಗಳ ಫಲಿತಾಂಶಗಳು ಮತ್ತು ಅದಕ್ಕೆ ಸಂಬಂಧಪಟ್ಟ ಸುಸಂಗತ ಮಾಹಿತಿಯನ್ನು ದಾಖಲಿಸುವುದಕ್ಕಾಗಿ ಒಂದು ರಿಜಿಸ್ಟರನ್ನು ನಿರ್ವಹಿಸತಕ್ಕದ್ದು ಮತ್ತು ಅವನು ಪ್ರತಿಯೊಂದು ವ್ಯಕ್ತಿಯ ಪ್ರಕರಣದ ಬಗ್ಗೆ ಸಂಬಂಧಪಟ್ಟ ದಾಖಲೆಗಳ ಸಹಿತ ಪ್ರತ್ಯೇಕ ಕಡತಗಳನ್ನು ಸಹ ನಿರ್ವಹಿಸತಕ್ಕದ್ದು.

(v) ಅವನು ಸಲಹಾ ಮಂಡಳಿಯ ಸಂಚಾಲಕನಿಗೆ ಸದಸ್ಯ–ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸತಕ್ಕದ್ದು. ಅವನು ಸದಸ್ಯರಿಂದ ಅಗತ್ಯ ಸಲಹೆ ಮತ್ತು ಸಹಾಯವನ್ನು ಪಡೆಯುವುದಕ್ಕಾಗಿ ಸಲಹಾ ಮಂಡಳಿಯ ಸದಸ್ಯರೊಂದಿಗೆ ನಿಯತ ಸಂಪರ್ಕವಿರಿಸಿಕೊಳ್ಳತಕ್ಕದ್ದು. ಅಗತ್ಯಬಿದ್ದಾಗಲೆಲ್ಲಾ ಈ ಅಧಿನಿಯಮದ ಜಾರಿಗೆ ಸಂಬಂಧಿಸಿದಂತೆ ಎಲ್ಲ ವ್ಯವಹಾರಗಳ ಬಗ್ಗೆ ಜಿಲ್ಲಾ ದಂಡಾಧಿಕಾರಿಗೆ ಅಥವಾ ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರದಿಂದ ಅಧಿಕೃತಗೊಂಡ ಯಾರೇ ಇತರ ವ್ಯಕ್ತಿಗೆ ಅವನು ತಿಳಿಸತಕ್ಕದ್ದು.

(vi) ಯಾವುದೇ ವಿವಾಹದ ಪಕ್ಷಕಾರರು ಸಲ್ಲಿಸಿದ ಉಡುಗೊರೆಗಳ ಎಲ್ಲ ಪಟ್ಟಿಗಳನ್ನು ತನ್ನ ಅಭಿರಕ್ಷೆಯಲ್ಲಿರಿಸಿಕೊಳ್ಳತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ನಿರ್ವಹಿಸಬೇಕಾದ ರಿಜಿಸ್ಟರಿನಲ್ಲಿ ಅದಕ್ಕೆ ಸಂಬಂಧಪಟ್ಟ ನಮೂದುಗಳನ್ನು ಮಾಡತಕ್ಕದ್ದು, ಅವನು ಈ ಪಟ್ಟಿಗಳನ್ನು ಸಹ ಪರಿಶೀಲಿಸತಕ್ಕದ್ದು ಮತ್ತು ವಧು ವರದಕ್ಷಿಣೆ ನಿಷೇಧ (ವಧು ಮತ್ತು ವರನಿಗೆ ನೀಡಿದ ಉಡುಗೊರೆಗಳ ಪಟ್ಟಿಗಳ ನಿರ್ವಹಣೆ) ನಿಯಮಗಳು, 1985ರ ಉಪಬಂಧಗಳನ್ನು ಪಾಲಿಸಲಾಗಿದೆ ಎಂಬ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

(vii) ಅವನು, ತನ್ನ ಕರ್ತವ್ಯಗಳನ್ನು ಯುಕ್ತ ಜಾಗರೂಕತೆಯಿಂದ, ಸಭ್ಯತೆಯಿಂದ ಮತ್ತು ರಹಸ್ಯ ಕಾಪಾಡಿಕೊಂಡು ಮತ್ತು ಕೌಟುಂಬಿಕ ಸಂಬಂಧದ ಘನತೆಯನ್ನು ಮತ್ತು ಸೌಹಾರ್ದತೆಯನ್ನು ಎತ್ತಿಹಿಡಿಯುವ ರೀತಿಯಲ್ಲಿ ನಿರ್ವಹಿಸತಕ್ಕದ್ದು.

(viii) ಅವನ ದೃಷ್ಟಿಕೋನವು ಮುಖ್ಯವಾಗಿ ನಿವಾರಣಾತ್ಮಕ ಹಾಗೂ ಪರಿಹಾರಾತ್ಮಕವಾಗಿರತಕ್ಕದ್ದು ಮತ್ತು ಎಲ್ಲಾ ಇತರ ಕ್ರಮಗಳು ಹಾಗೂ ನಿರ್ದೇಶನಗಳು ಪರಿಣಾಮಕಾರಿಯಾಗಿಲ್ಲವೆಂದು ಕಂಡುಬಂದರೆ ಅಥವಾ ಪಕ್ಷಕಾರರು ನಿಗದಿಪಡಿಸಿದ ಸಮಯದೊಳಗಾಗಿ ಆದೇಶಗಳನ್ನು ಅಥವಾ ನಿರ್ದೇಶನಗಳನ್ನು ಪಾಲಿಸುವಲ್ಲಿ ವಿಫಲರಾದರೆ ಮಾತ್ರವೇ ಪ್ರಾಸಿಕ್ಯೂಷನನ್ನು ಜರುಗಿಸಲು ಶಿಫಾರಸು ಮಾಡತಕ್ಕದ್ದು ಅಥವಾ ಅದನ್ನು ಜರುಗಿಸತಕ್ಕದ್ದು.

(ix) ಅವನು, ಸ್ವೀಕರಿಸಿದ ಪ್ರತಿಯೊಂದು ದೂರನ್ನು, ನಮೂನೆ–II ರಲ್ಲಿರುವ ರಿಜಿಸ್ಟರಿನಲ್ಲಿ ಕ್ರಮಸಂಖ್ಯೆ ನೀಡಿ ಸೂಕ್ತ ರೀತಿಯಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು.

(x) ಅವನು, ದೂರನ್ನು ಪರಿಶೀಲಿಸತಕ್ಕದ್ದು ಮತ್ತು ದೂರಿನ ಸ್ವರೂಪವು ಮತ್ತು ಅದರಲ್ಲಿರುವ ಒಳಾಂಶಗಳು 3, 4, 4–ಎ, 5 ಅಥವಾ 6ನೇ ಪ್ರಕರಣಗಳ ವ್ಯಾಪ್ತಿಯೊಳಗೆ ಬರುತ್ತವೆಂದು ಸ್ಪಷ್ಟವಾಗಿ ಕಂಡುಬಂದರೆ ಆ ದೂರಿನ ನೈಜತೆಗೆ ಸಂಬಂಧಿಸಿದಂತೆ ಪಕ್ಷಕಾರರಿಂದ ಅಂಥ ಸಾಕ್ಷ್ಯ ಸಂಗ್ರಹಿಸಲು ಕೂಡಲೇ ವಿಚಾರಣೆ ನಡೆಸತಕ್ಕದ್ದು.

(xi) ಅವನು, ಈ ಅಧಿನಿಯಮದ ಮೇರೆಗೆ ತಾನು ಮಾಡಿದ ಕೆಲಸದ ಬಗ್ಗೆ, ಸ್ವೀಕರಿಸಿದ ದೂರುಗಳ ಸಂಖ್ಯೆಯ ಬಗ್ಗೆ ಮತ್ತು ಕೈಗೊಂಡ ಕ್ರಮದ ಬಗ್ಗೆ, ವಿವಾದ ಇತ್ಯರ್ಥದ ಸ್ವರೂಪದ ಬಗ್ಗೆ ನಮೂನೆ–II ರಲ್ಲಿ ಮೂರು ತಿಂಗಳಿಗೆ ಒಮ್ಮೆ ಕ್ರಮಬದ್ಧವಾಗಿ ಮುಖ್ಯ ವಧು ವರದಕ್ಷಿಣೆ ನಿಷೇಧ ಅಧಿಕಾರಿಗೆ ವರದಿಯನ್ನು ಕಳುಹಿಸತಕ್ಕದ್ದು. ಅವನು ಮುಖ್ಯ ವಧು ವರದಕ್ಷಿಣೆ ನಿಷೇಧ ಅಧಿಕಾರಿಯು ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ವಿವರಗಳನ್ನು ಮತ್ತು ವರದಿಗಳನ್ನು ನಮೂನೆ– II ರಲ್ಲಿ ಕಳುಹಿಸಿಕೊಡತಕ್ಕದ್ದು.

(xii) ಅವನು, ಸ್ಥಳ ಪರೀಕ್ಷೆಯನ್ನು ನಡೆಸತಕ್ಕದ್ದು ಮತ್ತು ಪಕ್ಷಕಾರರಿಂದ ಅಥವಾ ಸಾಕ್ಷಿದಾರರಿಂದ ಮೌಖಿಕವಾಗಿ ಅಥವಾ ಲಿಖಿತದಲ್ಲಿ ಅಂಥ ಸಾಕ್ಷ್ಯವನ್ನು ಸಂಗ್ರಹಿಸತಕ್ಕದ್ದು ಅಥವಾ ತನ್ನ ಕಚೇರಿಯಲ್ಲಿ ಅಥವಾ

ಪಕ್ಷಕಾರರಿಗೆ ಹೆಚ್ಚಿನ ಅನಾನುಕೂಲ ಅಥವಾ ತೊಂದರೆ ಯುಂಟಾಗದಂತೆ ಆತನಿಗೆ ಅನುಕೂಲವಾಗುವ ಸ್ಥಳದಲ್ಲಿ ಪಕ್ಷಕಾರರು ಅಥವಾ ಸಾಕ್ಷಿದಾರರ ವಿಚಾರಣೆ ನಡೆಸುವುದಕ್ಕಾಗಿ ದಿನಾಂಕವನ್ನು ಅವನು ನಿಗದಿಪಡಿಸಬಹುದು.

(xiii) ಅವನು, ಪಕ್ಷಕಾರರಿಗೆ ಮತ್ತು ಸಾಕ್ಷಿದಾರರಿಗೆ ನಮೂನೆ–III ರಲ್ಲಿ ದೂರುಗಳನ್ನು ವಿಚಾರಣೆ ಮಾಡುವ ದಿನಾಂಕ, ಸಮಯ ಮತ್ತು ಸ್ಥಳವನ್ನು ಕುರಿತು ತಿಳಿಸತಕ್ಕದ್ದು ಅಥವಾ ನೋಟೀಸುಗಳನ್ನು ನೀಡತಕ್ಕದ್ದು.

(xiv) ಪ್ರತಿಯೊಂದು ಅರ್ಜಿಯನ್ನು, ಅದನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳಿಗಿಂತ ಹೆಚ್ಚಾಗದ ಅವಧಿಯೊಳಗೆ ವಿಚಾರಣೆ ನಡೆಸತಕ್ಕದ್ದು ಮತ್ತು ಅಹವಾಲುಗಳನ್ನು ಆಲಿಸತಕ್ಕದ್ದು ಮತ್ತು ತೀರ್ಮಾನಕ್ಕೆ ಬರತಕ್ಕದ್ದು.

(xv) ದೂರು ಅಥವಾ ಅರ್ಜಿಯನ್ನು ವಿಚಾರಣೆ ಮಾಡುವುದಕ್ಕಾಗಿ ನಿಗದಿಪಡಿಸಿರುವ ದಿನಾಂಕದಂದು ಅಥವಾ ಅಂಥ ವಿಚಾರಣೆಯನ್ನು ಮುಂದೂಡಬಹುದಾದ ಯಾವುದೇ ಇತರ ದಿನಾಂಕದಂದು ಫಿರ್ಯಾದಿ ಅಥವಾ ಅರ್ಜಿದಾರ ಹಾಜರಾಗದಿದ್ದರೆ, ವಧು– ವರದಕ್ಷಿಣೆ ನಿಷೇಧ ಅಧಿಕಾರಿಯು, ಹಾಜರಾಗದ ಕಾರಣಕ್ಕಾಗಿ ದೂರು ಅಥವಾ ಅರ್ಜಿಯನ್ನು ತನ್ನ ವಿವೇಚನಾನುಸಾರ ವಜಾ ಮಾಡಬಹುದು ಅಥವಾ ವಿಚಾರಣೆ ನಡೆಸಿ ಅದರ ಗುಣವಾಗುಣಗಳನ್ನಾಧರಿಸಿ ತೀರ್ಮಾನಕ್ಕೆ ಬರಬಹುದು ಮತ್ತು ಅದನ್ನು ಪ್ರಕರಣದ ಕಡತದಲ್ಲಿ ದಾಖಲಿಸತಕ್ಕದ್ದು.

(xvi) ಅವನು, ಅಧಿನಿಯಮದ ಮೇರೆಗೆ ನೀಡಲಾದ ದೂರು, ಅರ್ಜಿ ಅಥವಾ ನಿವೇದನೆಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸುವುದಕ್ಕಾಗಿ ಅಥವಾ ವಿಚಾರಣೆಗಳನ್ನು ನಡೆಸುವುದಕ್ಕಾಗಿ ಅಥವಾ ವಿಚಾರಣೆಗಳ ಅಥವಾ ವ್ಯವಹರಣೆಗಳ ಯಾವುದೇ ಹಂತದಲ್ಲಿ ನೆರವಾಗುವುದಕ್ಕಾಗಿ ಆ ಪ್ರದೇಶದ ಜಿಲ್ಲಾ ಪರಿವೀಕ್ಷಣಾಧಿಕಾರಿಯ ಸೇವೆಗಳನ್ನು ಬಳಸಿಕೊಳ್ಳಬಹುದು.

(xvii) ವಧು ವರದಕ್ಷಿಣೆ ನಿಷೇಧ ಅಧಿಕಾರಿಗಳಿಂದ ಕೋರಿಕೆಯನ್ನು ಸ್ವೀಕರಿಸಿದ ತರುವಾಯ, ಪರಿವೀಕ್ಷಣಾಧಿಕಾರಿಗಳು ಅವನು ಕೋರಿರುವಂತೆ ಅಗತ್ಯ ವಿಚಾರಣೆಗಳನ್ನು ನಡೆಸತಕ್ಕದ್ದು, ಮಾಹಿತಿ ಸಂಗ್ರಹಿಸತಕ್ಕದ್ದು ಮತ್ತು ಅಂಥ ವಿವರಗಳನ್ನು ಅಥವಾ ವರದಿಯನ್ನು ಒದಗಿಸತಕ್ಕದ್ದು.

(xviii) ವಧುವಿನ ಹೊರತಾಗಿ ಯಾರೇ ವ್ಯಕ್ತಿಯು ವಧು ವರದಕ್ಷಿಣೆಯನ್ನು ಸ್ವೀಕರಿಸಿದ್ದಲ್ಲಿ ಮತ್ತು ಅಂಥ ವಧು ವರದಕ್ಷಿಣೆ ಸ್ವೀಕರಿಸುವುದಕ್ಕೆ 6ನೇ ಪ್ರಕರಣದ ಅನುಸಾರವಾಗಿ ಹಕ್ಕುಳ್ಳ ವಧುವಿಗೆ ಅದನ್ನು ವರ್ಗಾಯಿಸಿಲ್ಲವೆಂದು ದೂರು ಸ್ವೀಕರಿಸಿದ್ದರೆ ವಧು ವರದಕ್ಷಿಣೆ ನಿಷೇಧ ಅಧಿಕಾರಿಯು ಅದನ್ನು ನಿಗದಿತ ಕಾಲದೊಳಗೆ ವರ್ಗಾಯಿಸುವಂತೆ ಪಕ್ಷಕಾರರಿಗೆ ನಿರ್ದೇಶನ ನೀಡತಕ್ಕದ್ದು.

(xix) ಅವನು ಅಥವಾ ಆತನ ಸಿಬ್ಬಂದಿಯು ಪೊಲೀಸ್ ಅಧಿಕಾರಿಗಳೊಂದಿಗೆ ಭೇಟಿ ನೀಡುವ ಸಂಭವವಿರುವ ಅವನ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶದಲ್ಲಿ ನೆರವೇರಿದ ವಿವಾಹಗಳು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಲಾಗಿಲ್ಲವೆಂಬುದನ್ನು ಅವನು ನಿರ್ದಿಷ್ಟವಾಗಿ ಸ್ಪಷ್ಟಪಡಿಸತಕ್ಕದ್ದು.

(xx) ಅವನ, ಅಧಿಕಾರವ್ಯಾಪ್ತಿಯಲ್ಲಿ ಬರುವ ಪ್ರದೇಶದಲ್ಲಿ ನಡೆದ ಅಥವಾ ನಡೆಸಲು ಉದ್ದೇಶಿಸಿರುವ ವಿವಾಹಗಳಿಗೆ ಸಂಬಂಧಪಟ್ಟಂತೆ ಅಧಿನಿಯಮದ ಉಪಬಂಧವನ್ನು ಪಾಲಿಸದಿರುವುದರ ಕುರಿತು ಅಗತ್ಯ ವಿಚಾರಣೆಗಳನ್ನು ಅವನು ನಡೆಸತಕ್ಕದ್ದು.

(xxi) ಅಧಿನಿಯಮದ ಉಪಬಂಧಗಳನ್ನು ಪಾಲಿಸಲಾಗುತ್ತಿದೆಯೇ ಅಥವಾ ಉಲ್ಲಂಘಿಸ ಲಾಗುತ್ತಿಲ್ಲವೇ ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಪ್ರದೇಶದಲ್ಲಿ ನಡೆದ ಎಲ್ಲ ವಿವಾಹಗಳ ಬಗ್ಗೆ ಅವನು ಸೂಕ್ತ ವಿಧಾನಗಳ ಮೂಲಕ ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಸ್ಥಿರೀಕರಿಸತಕ್ಕದ್ದು.

(xxii) ಈ ಅಧಿನಿಯಮದ ಅಥವಾ ನಿಯಮಗಳ ಮೇರೆಗೆ ವಿಚಾರಣೆಗಳನ್ನು ನಡೆಸುವುದಕ್ಕಾಗಿ ಅವನು, ಯಾವುದೇ ವಿವಾಹಕ್ಕೆ ಹಾಜರಾದರೆ, ಅವನು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಯಾರೇ ಪೊಲೀಸ್ ಅಧಿಕಾರಿಯ ಅಥವಾ ಇತರ ಅಧಿಕಾರಿಗಳ ನೆರವು ಪಡೆಯಬಹುದು ಮತ್ತು ವಧು ವರದಕ್ಷಿಣೆ

ನಿಷೇಧ ಅಧಿಕಾರಿಯು ಅಗತ್ಯಪಡಿಸಿದಾಗ ಎಲ್ಲಾ ರೀತಿಯ ನೆರವು ನೀಡುವುದು ಪೋಲೀಸ್ ಅಧಿಕಾರಿಯ ಅಥವಾ ಇತರ ಅಧಿಕಾರಿಗಳ ಕರ್ತವ್ಯವಾಗಿರತಕ್ಕದ್ದು.

(xxiii) ಅವನು ಅಧಿನಿಯಮದ ಮೇರೆಗೆ ಸಲ್ಲಿಸಲಾದ ದೂರಿನ ತನಿಖೆ ಮಾಡುವುದರಲ್ಲಿ ಪೋಲೀಸರಿಗೆ ಮತ್ತು ಪ್ರಕರಣದ ಅಧಿವಿಚಾರಣೆ ನಡೆಸುವುದರಲ್ಲಿ ನ್ಯಾಯಾಲಯಕ್ಕೆ ನೆರವು ನೀಡತಕ್ಕದ್ದು.

(xxiv) ಅವನು, ಅಧಿನಿಯಮದ ಮೇರೆಗೆ ತಾನು ನಿರ್ವಹಿಸಬೇಕಿರುವ ಪ್ರಕಾರ್ಯಗಳಿಗೆ ಸಂಬಂಧಿಸಿದಂತೆ ಸಲಹಾ ಮಂಡಲಿಯ ಮಾರ್ಗದರ್ಶನವನ್ನು ಕೋರತಕ್ಕದ್ದು.

(xxv) ಸಲಹಾ ಮಂಡಲಿಯ ಸದಸ್ಯ ಕಾರ್ಯದರ್ಶಿಯಾಗಿ ಅಥವಾ ಸಂಚಾಲಕನಾಗಿ ಅವನು, ಸಲಹಾ ಮಂಡಲಿಯ ಪ್ರತಿಯೊಂದು ಸಭೆಯ ವ್ಯವಹರಣೆಗಳ ಒಂದು ಪ್ರತಿಯನ್ನು ಸಭೆ ನಡೆದ ದಿನಾಂಕದಿಂದ ಹದಿನೈದು ದಿನಗಳೊಳಗೆ ಜಿಲ್ಲಾ ದಂಡಾಧಿಕಾರಿಗೆ ಮತ್ತು ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕೈಗೊಳ್ಳುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(xxvi) ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅವನಿಗೆ ವಹಿಸಿಕೊಡಬಹುದಾದಂಥ ಇತರ ಕರ್ತವ್ಯಗಳನ್ನು ಸಹ ಅವನು ನೆರವೇರಿಸತಕ್ಕದ್ದು.

**6. ಮುಖ್ಯ ವಧು – ವರದಕ್ಷಿಣೆ ನಿಷೇಧ ಅಧಿಕಾರಿಯ ನೇಮಕಾತಿ ವಿಧಾನ, ಆತನ ಕರ್ತವ್ಯಗಳು ಮತ್ತು ಪ್ರಕಾರ್ಯಗಳು.–** (1) ರಾಜ್ಯ ಸರ್ಕಾರವು, ರಾಜ್ಯದಾದ್ಯಂತ ವಧು ವರದಕ್ಷಿಣೆ ನಿಷೇಧಕ್ಕೆ ಸಂಬಂಧಿಸಿದ ಕೆಲಸವನ್ನು ನಿರ್ವಹಿಸುವುದಕ್ಕಾಗಿ ಮತ್ತು ಸಮನ್ವಯಗೊಳಿಸುವುದಕ್ಕಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರನ್ನು ಮುಖ್ಯ ವಧು ವರದಕ್ಷಿಣೆ ನಿಷೇಧ ಅಧಿಕಾರಿಯೆಂದು ಹೆಸರಿಸತಕ್ಕದ್ದು.

(2) ಮುಖ್ಯ ವಧು ವರದಕ್ಷಿಣೆ ನಿಷೇಧ ಅಧಿಕಾರಿಯು, ವಧು ವರದಕ್ಷಿಣೆ ನಿಷೇಧ ಅಧಿಕಾರಿಗಳ ಕೆಲಸವನ್ನು ಸಮನ್ವಯಗೊಳಿಸತಕ್ಕದ್ದು ಮತ್ತು ಸಾರ್ವಜನಿಕರಲ್ಲಿ ವಧು ವರದಕ್ಷಿಣೆ ಪದ್ಧತಿಯನ್ನು ತಡೆಗಟ್ಟುವುದಕ್ಕಾಗಿ ಅರಿವು ಮತ್ತು ಜಾಗೃತಿಯನ್ನುಂಟು ಮಾಡುವುದಕ್ಕಾಗಿ ಮತ್ತು ವಧು ವರದಕ್ಷಿಣೆ ಪದ್ಧತಿಯ ಪಿಡುಗನ್ನು ನಿರ್ಮೂಲನೆ ಮಾಡುವ ದೃಷ್ಟಿಯಿಂದ ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಹೊಣೆಗಾರನಾಗಿರತಕ್ಕದ್ದು.

(3) ಮುಖ್ಯ ವಧು ವರದಕ್ಷಿಣೆ ನಿಷೇಧ ಅಧಿಕಾರಿಯು, ವಧು ವರದಕ್ಷಿಣೆ ನಿಷೇಧ ಅಧಿನಿಯಮದ ಅನುಷ್ಠಾನದ ಪ್ರಗತಿ ಮತ್ತು ಸಂಬಂಧಪಟ್ಟ ವಿಷಯಗಳನ್ನು ಕುರಿತ ವಾರ್ಷಿಕ ವರದಿಯನ್ನು ಸಿದ್ಧಪಡಿಸಿ ಸಲ್ಲಿಸಲು ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಗತ್ಯಪಡಿಸುವಂಥ ಅಂಕಿ ಅಂಶಗಳನ್ನು ಒದಗಿಸಲು ಹೊಣೆಗಾರನಾಗಿರತಕ್ಕದ್ದು.

(4) ಮುಖ್ಯ ವಧು ವರದಕ್ಷಿಣೆ ನಿಷೇದ ಅಧಿಕಾರಿಯು ಈ ಮುಂದಿನವುಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳಿಗೂ ಸೂಚನೆಗಳನ್ನು ನೀಡತಕ್ಕದ್ದು.

(i) ಪ್ರತಿಯೊಬ್ಬ ಸರ್ಕಾರಿ ನೌಕರನೂ ತನ್ನ ವಿವಾಹದ ನಂತರ ತಾನು ಯಾವುದೇ ವರದಕ್ಷಿಣೆ ತೆಗೆದುಕೊಂಡಿಲ್ಲವೆಂದು ಹೇಳಿ ಇಲಾಖಾ ಮುಖ್ಯಸ್ಥರಿಗೆ ಘೋಷಣೆ ಸಲ್ಲಿಸತಕ್ಕದ್ದು. ಈ ಘೋಷಣೆಗೆ ಆತನ ಹೆಂಡತಿ, ತಂದೆ ಮತ್ತು ಮಾವ ಸಹಿ ಹಾಕತಕ್ಕದ್ದು.

(ii) ವರ್ಷದ ರಾಷ್ಟ್ರೀಯ ಐಕ್ಯತಾ ದಿನವನ್ನು ವಧು ವರದಕ್ಷಿಣೆ ನಿಷೇಧ ದಿನವನ್ನಾಗಿ ಆಚರಿಸುವುದು.

(iii) ಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ಮತ್ತು ಇತರ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ವರದಕ್ಷಿಣೆ ಕೊಡುವುದಿಲ್ಲ ಅಥವಾ ತೆಗೆದುಕೊಳ್ಳುವುದಿಲ್ಲವೆಂಬ ಪ್ರತಿಜ್ಞೆ ಮಾಡಿಸುವುದು.

**7. ವಿವಾಹದ ಪಕ್ಷಕಾರರು ಉಡುಗೊರೆಗಳ ಪಟ್ಟಿಯನ್ನು ಸಲ್ಲಿಸುವುದು.–** ಯಾವುದೇ ವಿವಾಹದ ಪಕ್ಷಕಾರರು ಅಥವಾ ಯಾರೇ ತಂದೆತಾಯಿಯರು ಅಥವಾ ಅವರಲ್ಲಿ ಯಾರೇ ಒಬ್ಬರು, ವಧು ವರದಕ್ಷಿಣೆ ನಿಷೇಧ (ವಧು ಮತ್ತು ವರನಿಗೆ ಕೊಟ್ಟಿರುವ ಉಡುಗೊರೆಗಳ ಪಟ್ಟಿಯ ನಿರ್ವಹಣೆ) ನಿಯಮಗಳು, 1985ರ ಅನುಸಾರವಾಗಿ ತಯಾರಿಸಲಾದ ಉಡುಗೊರೆಗಳ ಪಟ್ಟಿಯ ಒಂದು ಪ್ರತಿಯನ್ನು ವಿವಾಹದ ದಿನಾಂಕದಿಂದ ಒಂದು ತಿಂಗಳೊಳಗೆ ವಧು ವರದಕ್ಷಿಣೆ ನಿಷೇಧ ಅಧಿಕಾರಿಗೆ ಸಲ್ಲಿಸತಕ್ಕದ್ದು.

**8. ಅಪರಾಧಿಗಳ ಪ್ರಾಸಿಕ್ಯೂಷನ್ನಿಗಾಗಿ ಕಾರ್ಯವಿಧಾನ.–** ವಧು ವರದಕ್ಷಿಣೆ ನಿಷೇಧ ಅಧಿಕಾರಿಯು ತನಿಖೆ ಮಾಡಿದ ದೂರಿನ ಪ್ರಕರಣದಲ್ಲಿ ಅಧಿನಿಯಮದ ಮೇರೆಗೆ ಅಪರಾಧವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದರೆ ಅವನು, ಅಪರಾಧಿಗಳ ಪ್ರಾಸಿಕ್ಯೂಷನ್ನಿಗಾಗಿ ದಾಖಲಿಸಿರುವ ಹೇಳಿಕೆಯೊಂದಿಗೆ ಇತರ ಎಲ್ಲಾ ಸಂಬಂಧಪಟ್ಟ ದಸ್ತಾವೇಜುಗಳು ಮತ್ತು ಅವನ ಸಂಕ್ಷಿಪ್ತ ನಿರ್ಣಯಗಳ ಸಹಿತ ಒಂದು ವರದಿಯನ್ನು ಸಕ್ಷಮ ದಂಡಾಧಿಕಾರಿಗೆ ಸಲ್ಲಿಸತಕ್ಕದ್ದು. ಈ ವರದಿಯನ್ನು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ ಅಧಿನಿಯಮ 2)ರ 173ನೇ ಪ್ರಕರಣದ ಮೇರೆಗಿನ ವರದಿಯೆಂದು ಭಾವಿಸತಕ್ಕದ್ದು.

**9. ಕ್ಷೇಮಾಭಿವೃದ್ಧಿ ಸಂಸ್ಥೆಗಳಿಗೆ ಮಾನ್ಯತೆ ನೀಡುವುದು.–** (1) ಈ ಕೆಳಗೆ ಹೇಳಿರುವ ಯಾವುದೇ ವಿಧವಾದ ಕಾರ್ಯಗಳನ್ನು ಮಾಡುವುದಕ್ಕೆ ಮುಖ್ಯವಾಗಿ ತನ್ನನ್ನು ತೊಡಗಿಸಿಕೊಂಡಿರುವ ಮತ್ತು ಈ ಕ್ಷೇತ್ರದಲ್ಲಿ ಮೂರು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯವರೆಗೆ ಗಣನೀಯ ಸೇವೆಯನ್ನು ಸಲ್ಲಿಸಿದ ಕ್ಷೇಮಾಭಿವೃದ್ಧಿ ಸಂಸ್ಥೆಯು ಅಥವಾ ಸಂಘಟನೆಯು 7ನೇ ಪ್ರಕರಣದ (i)ನೇ ಉಪಪ್ರಕರಣದ (ಬಿ) ಖಂಡದ (ii)ನೇ ಉಪಖಂಡದ ಮೇರೆಗೆ ಮಾನ್ಯತೆಯನ್ನು ಕೋರುವುದಕ್ಕೆ ಅರ್ಹವಾಗಿರುತ್ತದೆ.

(ಎ) ಮಹಿಳೆಯರ ಪಾಲನೆ, ಸಂರಕ್ಷಣೆ ಮತ್ತು ತರಬೇತಿ ಸೇರಿದಂತೆ ಸಮಾಜ ಕಲ್ಯಾಣ;

(ಬಿ) ರಾಜ್ಯ ಅಥವಾ ರಾಷ್ಟ್ರವ್ಯಾಪಿ ಮಹಿಳಾ ಸಂಘಟನೆಗಳು, ಪ್ರಮುಖ ಮಹಿಳಾ ಸಮಾಜಗಳು ಅಥವಾ ಮಹಿಳಾ ಸಂಘಟನೆಗಳು;

(ಸಿ) ನಿರ್ಗತಿಕ, ವಿಮೋಚಿತ ಮಹಿಳೆ ಮತ್ತು ಮಕ್ಕಳ ಪಾಲನೆ ಮತ್ತು ಸಂರಕ್ಷಣೆ ಸೇರಿದಂತೆ ಸಾಮಾಜಿಕ ರಕ್ಷಣೆ;

(ಡಿ) ಸಾಮಾಜಿಕ ಪಿಡುಗುಗಳನ್ನು ತೊಡೆದುಹಾಕುವುದರಲ್ಲಿ ಆಸಕ್ತರಾಗಿರುವ ವಕೀಲರ ಯಾವುದೇ ಸಂಘಟನೆ.

(2) (1)ನೇ ಉಪನಿಯಮದ ಮೇರೆಗೆ ಅರ್ಹತೆಯುಳ್ಳ ಮತ್ತು ಮಾನ್ಯತೆ ಬಯಸಿರುವ ಯಾವುದೇ ಕ್ಷೇಮಾಭಿವೃದ್ಧಿ ಸಂಸ್ಥೆಯು ಅಥವಾ ಸಂಘಟನೆಯು, ಅದರ ನಿಯಮಗಳು, ಉಪವಿಧಿಗಳು, ಸಂಸ್ಥೆಯ ಅಂತರ್ನಿಯಮಾವಳಿಗಳು, ಅದರ ಸದಸ್ಯರು ಮತ್ತು ಪದಾಧಿಕಾರಿಗಳ ಪಟ್ಟಿ ಇವುಗಳೆಲ್ಲದರ ಒಂದೊಂದು ಪ್ರತಿಯನ್ನು ಹಾಗೂ ಅದರ ಚಟುವಟಿಕೆಗಳಿಗೆ ಮತ್ತು ಸಾಮಾಜಿಕ ಅಥವಾ ಸಮುದಾಯ ಸೇವೆಯಲ್ಲಿ ಹಿಂದೆ ಅದು ಮಾಡಿದ ಸಾಧನೆಗೆ ಸಂಬಂಧಪಟ್ಟ ವರದಿಯೊಂದಿಗೆ ನಮೂನೆ– IV ರಲ್ಲಿ ರಾಜ್ಯ ಸರ್ಕಾರಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

(3) ರಾಜ್ಯ ಸರ್ಕಾರವು, ಸಂಬಂಧಪಟ್ಟ ಇಲಾಖೆಯ ಹಿರಿಯ ಅಧಿಕಾರಿಯಿಂದ ಅಂಥ ವಿಚಾರಣೆಯನ್ನು ಮಾಡಿಸಿದ ತರುವಾಯ ಮತ್ತು ಈ ಸಂಬಂಧದಲ್ಲಿ ಅರ್ಜಿ ಸಲ್ಲಿಸಿರುವ ಸಂಸ್ಥೆ ಅಥವಾ ಸಂಘಟನೆಯು ಈ ಹಿಂದೆ ಮಾಡಿರುವ ಸೇವೆಯ ಸ್ವರೂಪ ಮತ್ತು ಸಾಧನೆಗೆ ಸಂಬಂಧಪಟ್ಟ ವರದಿಯನ್ನು ಪರಿಗಣನೆಗೆ ತೆಗೆದುಕೊಂಡ ತರುವಾಯ, ಐದು ವರ್ಷಗಳ ಅವಧಿಗಾಗಿ ಮಾನ್ಯತೆಯನ್ನು ಮಂಜೂರು ಮಾಡಬಹುದು ಮತ್ತು ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ ನಂತರ ಅದನ್ನು ನವೀಕರಿಸಬಹುದು.

(4) ನವೀಕರಣಕ್ಕಾಗಿ ಅಥವಾ ಮಾನ್ಯತೆಗಾಗಿ ಅರ್ಜಿಯನ್ನು ನಮೂನೆ–Vರಲ್ಲಿ ಸಲ್ಲಿಸತಕ್ಕದ್ದು. ಅದರ ಬಗ್ಗೆ (3)ನೇ ಉಪನಿಯಮದಲ್ಲಿ ಹೇಳಲಾದ ಪ್ರಕ್ರಿಯೆಗನುಸಾರವಾಗಿ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಸಂಸ್ಥೆಯ ಅಥವಾ ಸಂಘಟಣೆಯ ಕಾರ್ಯನಿರ್ವಹಣೆ ಸಾಕಷ್ಟು ತೃಪ್ತಿಕರವಾಗಿದೆ ಎಂದು ವರದಿ ಮಾಡಲಾಗಿರುವ ಸಂದರ್ಭಗಳಲ್ಲಿ ಮಾನ್ಯತೆಯನ್ನು ನವೀಕರಿಸತಕ್ಕದ್ದು.

(5) ಸಂಸ್ಥೆಯ ಅಥವಾ ಸಂಘಟಣೆಯ ಕಾರ್ಯನಿರ್ವಹಣೆ ತೃಪ್ತಿಕರವಾಗಿಲ್ಲವೆಂದು ಮುಖ್ಯ ವಧು ವರದಕ್ಷಿಣೆ ಅಧಿಕಾರಿಗೆ ಕಂಡುಬಂದರೆ ಅಥವಾ ಹಾಗೆಂದು ವರದಿಯಾಗಿದ್ದರೆ, ರಾಜ್ಯ ಸರ್ಕಾರವು, ಅಂಥ ಸಂಸ್ಥೆಗೆ ಅಥವಾ ಸಂಘಟಣೆಗೆ ನೀಡಿರುವ ಮಾನ್ಯತೆಯನ್ನು ಹಿಂದಕ್ಕೆ ತೆಗೆದುಕೊಳ್ಳಬಹುದು.

**10. ಯಾವ ಮಿತಿಗಳು ಮತ್ತು ಷರತ್ತುಗಳಿಗೆ ಒಳಪಟ್ಟು ವಧು – ವರದಕ್ಷಿಣೆ ನಿಷೇಧ ಅಧಿಕಾರಿಯು ಪೋಲೀಸು ಅಧಿಕಾರಿಯ ಅಧಿಕಾರಗಳನ್ನು ಚಲಾಯಿಸಬಹುದೋ ಆ ಮಿತಿಗಳು ಮತ್ತು ಷರತ್ತುಗಳು.–** (1) ದಂಡ ಪ್ರಕ್ರಿಯಾ ಸಂಹಿತೆಯ Vನೇ ಅಧ್ಯಾಯದ ಉಪಬಂಧಗಳನ್ನುಳಿದು, ಮತ್ತು ಅವುಗಳನ್ನು ಹೊರತುಪಡಿಸಿ, ಎಂದರೆ, ವಾರಂಟಿಲ್ಲದೆ ಒಬ್ಬ ವ್ಯಕ್ತಿಯನ್ನು ಬಂಧಿಸುವ ಅಧಿಕಾರವನ್ನು ಹೊರತುಪಡಿಸಿ, ವಧು ವರದಕ್ಷಿಣೆ ನಿಷೇಧ ಅಧಿಕಾರಿಯು, ತನಿಖೆಯ ಉದ್ದೇಶಕ್ಕಾಗಿ ಸಕ್ಷಮ ದಂಡಾಧಿಕಾರಿಯ ಮುಂದೆ ವರದಿಯನ್ನು ಒಪ್ಪಿಸುವುದಕ್ಕಾಗಿ ಸದರಿ ಸಂಹಿತೆಯ ಮೇರೆಗೆ ಪೋಲೀಸು ಅಧಿಕಾರಿಯ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ವಧು ವರದಕ್ಷಿಣೆ ನಿಷೇಧ ಅಧಿಕಾರಿಯು, ಈ ಅಧಿನಿಯಮದ ಮೇರೆಗೆ ದಂಡಿಸಬಹುದಾದ ಅಪರಾಧವು, ತನ್ನ ಅಧಿಕಾರ ವ್ಯಾಪ್ತಿಯೊಳಗೆ ನಡೆದಿದೆಯೆಂದು ಅಥವಾ ನಡೆಯುತ್ತಿದೆ ಎಂದು ಅಥವಾ ನಡೆಯಲಿರುವುದೆಂದು ಮತ್ತು ವಾರಂಟಿನೊಂದಿಗೆ ಯಾವುವೇ ಆವರಣಗಳ ಶೋಧಿಸುವುದನ್ನು ಅನುಚಿತ ವಿಳಂಬವಿಲ್ಲದೆ ಮಾಡಲಾಗುವುದಿಲ್ಲವೆಂದು

ನಂಬಲು ಯುಕ್ತ ಕಾರಣಗಳನ್ನು ಹೊಂದಿರುವಾಗಲೆಲ್ಲಾ ಅವನು, ಹಾಗೆ ನಂಬಲು ಇದ್ದ ಕಾರಣಗಳನ್ನು ಜಿಲ್ಲಾ ದಂಡಾಧಿಕಾರಿಗೆ ವರದಿ ಮಾಡಿದ ತರುವಾಯ ವಾರಂಟಿಲ್ಲದೆ ಅಂಥ ಆವರಣಗಳನ್ನು ಶೋಧಿಸಬಹುದು.

(3) (2)ನೇ ಉಪನಿಯಮದ ಮೇರೆಗೆ ಶೋಧನೆ ಮಾಡುವುದಕ್ಕೆ ಮುಂಚೆ ವಧು ವರದಕ್ಷಿಣೆ ನಿಷೇಧ ಅಧಿಕಾರಿಯು, ಶೋಧನೆ ಮಾಡುವ ಸ್ಥಳ ಇರುವ ಪ್ರದೇಶದ ಇಬ್ಬರು ಅಥವಾ ಹೆಚ್ಚಿನ ನಿವಾಸಿಗಳಿಗೆ, ಹಾಜರಾಗಿ ಶೋಧನೆಗೆ ಸಾಕ್ಷಿದಾರರಾಗಿರುವಂತೆ ಕೋರತಕ್ಕದ್ದು ಮತ್ತು ಅವರಿಗೆ ಅಥವಾ ಅವರಲ್ಲಿ ಯಾರೇ ಒಬ್ಬರಿಗೆ ಹಾಗೆ ಮಾಡುವಂತೆ ಬರವಣಿಗೆಯಲ್ಲಿ ಆದೇಶವನ್ನು ಹೊರಡಿಸಬಹುದು.

(4) ಯಾರೇ ವ್ಯಕ್ತಿಯು, ಯುಕ್ತ ಕಾರಣವಿಲ್ಲದೆ, ಈ ನಿಯಮದ ಮೇರೆಗೆ ಹಾಜರಾಗಿ ಶೋಧನೆಗೆ ಸಾಕ್ಷಿದಾರನಾಗಲು ಕೋರಿ ಬರವಣಿಗೆಯಲ್ಲಿನ ಆದೇಶವನ್ನು ಅವನಿಗೆ ಕಳಿಸಿಕೊಟ್ಟ ಅಥವಾ ಸಲ್ಲಿಸಿದ ತರುವಾಯ ಹಾಗೆ ಮಾಡಲು ಆತನು ಅಲಕ್ಷ್ಯ ಮಾಡಿದರೆ ಅವನು ದಂಡ ಸಂಹಿತೆ (1860ರ 45)ಯ 187ನೇ ಪ್ರಕರಣದ ಮೇರೆಗೆ ಅಪರಾಧ ಮಾಡಿರುವನೆಂದು ಭಾವಿಸತಕ್ಕದ್ದು.

**11. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮ ಅಥವಾ ನಿಯಮಗಳಿಗನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಕ್ರಮಕ್ಕೆ ಸಂಬಂಧಿಸಿದಂತೆ, ಸರ್ಕಾರ, ಮುಖ್ಯ ವಧು ವರದಕ್ಷಿಣೆ ನಿಷೇಧ ಅಧಿಕಾರಿಗಳು, ವಧು ವರದಕ್ಷಿಣೆ ನಿಷೇಧ ಅಧಿಕಾರಿಗಳು ಮತ್ತು ಯಾರೆ ಪೊಲೀಸು ಅಧಿಕಾರಿ ಅಥವಾ ಅವನಿಗೆ ನೆರವು ನೀಡಿದ ವ್ಯಕ್ತಿ, ಪರಿವೀಕ್ಷಣಾ ಅಧಿಕಾರಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**12. ಅರ್ಥವಿವರಣೆ.–** ಈ ನಿಯಮಗಳ ಅರ್ಥವಿವರಣೆಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆ ಉದ್ಭವಿಸಿದರೆ ಅವುಗಳನ್ನು ಸರ್ಕಾರದ ನಿರ್ಣಯಕ್ಕೆ ಉಲ್ಲೇಖಿಸತಕ್ಕದ್ದು.

**13. ನಿರಸನ ಮತ್ತು ಉಳಿಸುವಿಕೆಗಳು.–** ವಧು ವರದಕ್ಷಿಣೆ ನಿಷೇಧ (ಕರ್ನಾಟಕ) ನಿಯಮಗಳು, 1999ನ್ನು ಈ ಮೂಲಕ ನಿರಸನಗೊಳಿಸಲಾಗಿದೆ. ಹಾಗೆ ನಿರಸನಗೊಳಿಸಿದ್ದರೂ ಸದರಿ ನಿಯಮಗಳ ಮೇರೆಗೆ ಮಾಡಿದ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮ, ಈ ನಿಯಮಗಳ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಆರ್. ಎಂ. ಚಂದ್ರಮ್ಮ**

ಸರ್ಕಾರದ ಅಧೀನ ಕಾರ್ಯದರ್ಶಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

## ನಮೂನೆ – I

### (5 (iv)ನೇ ನಿಯಮ ನೋಡಿ)

### ದೂರುಗಳ / ಅರ್ಜಿಗಳ ರಿಜಿಸ್ಟರು

| ಕ್ರ.ಸಂ. | ದೂರುಗಳ ಪಟ್ಟಿ | ಅರ್ಜಿದಾರನ ಹೆಸರು ಮತ್ತು ವಿಳಾಸ | ಗೊತ್ತುಪಡಿಸಿದ ಅಥವಾ ನಡೆದ ವಿವಾಹದ ಸಂಬಂಧ | ಗೊತ್ತುಪಡಿಸಿದ ಅಥವಾ ನಡೆದ ವಿವಾಹದ ದಿನಾಂಕ | ಅರ್ಜಿಯನ್ನು / ದೂರನ್ನು ಸ್ವೀಕರಿಸಿದ ದಿನಾಂಕ | ವಿಚಾರಣೆಯ ದಿನಾಂಕ | ಇತ್ಯರ್ಥದ ಸ್ವರೂಪ | ಅಧಿಕಾರಿಯ ಚಿಕ್ಕ ರುಜು / ಸಹಿ | ಷರಾಗಳು |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |

## ನಮೂನೆ –II

### (ನಿಯಮ 5 ಉಪನಿಯಮ (ix)ನೋಡಿ)

### ವಧು ವರದಕ್ಷಿಣೆ ನಿಷೇಧ ಅಧಿನಿಯಮ, 1961ನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಪಟ್ಟಂತೆ ತ್ರೈಮಾಸಿಕ ಪ್ರಗತಿ ವರದಿ

| ಕ್ರ.ಸಂ. | ಸ್ವೀಕರಿಸಲಾದ ಅರ್ಜಿ/ ದೂರುಗಳ ವಿವರಗಳು | ಯಾರಿಂದ ಹೆಸರು ಮತ್ತು ವಿಳಾಸ | ದೂರುಗಳ / ಅರ್ಜಿಯ ಸ್ವರೂಪ | ನೋಂದಣಿಯ ದಿನಾಂಕ | ಕೈಗೊಂಡ ಕ್ರಮ | ವಿವಾದ ಬಗೆಹರಿದ ಸ್ವರೂಪ | ಅಧಿಕಾರಿಗಳ ಚಿಕ್ಕ ರುಜುಗಳು ದಿನಾಂಕ ಸಹಿತ | ಷರಾಗಳು |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |

ವಧು ವರದಕ್ಷಿಣೆ ನಿಷೇಧ ಅಧಿಕಾರಿ

## ನಮೂನೆ –III

**(ನಿಯಮ 5 ಉಪನಿಯಮ (xii)ನೋಡಿ)**

**ವಧು ವರದಕ್ಷಿಣೆ ನಿಷೇಧ ಅಧಿಕಾರಿಯ ಮುಂದೆ ಹಾಜರಾಗಲು ನೋಟೀಸು**

**ಗೆ:**

(ಯಾರ ವಿರುದ್ಧ ದೂರನ್ನು
ಸ್ವೀಕರಿಸಲಾಗಿದೆಯೋ ಆ ವ್ಯಕ್ತಿಯ ಹೆಸರು
ಮತ್ತು ವಿಳಾಸ)

––––––––––––––––– ನ ದೂರಿಗೆ ಸಂಬಂಧಿಸಿದಂತೆ (ಆರೋಪಿಸಲಾದ ಅಪರಾಧವನ್ನು ಸಂಕ್ಷಿಪ್ತವಾಗಿ ತಿಳಿಸಿ) ಮಾಹಿತಿಯನ್ನು ಮತ್ತು ಸಾಕ್ಷ್ಯವನ್ನು ಸಂಗ್ರಹಿಸಲು ನಿಮ್ಮ ಹಾಜರಾತಿ ಅವಶ್ಯಕವಾಗಿರುವುದರಿಂದ ನಿಮ್ಮನ್ನು ಈ ಮೂಲಕ –––––––– ದಿನದಂದು –––––––– (ಸ್ಥಳ)ದ ––– ––– ಕಚೇರಿಯಲ್ಲಿ ––––––––––––– ಸಮಯಕ್ಕೆ ವಧು ವರದಕ್ಷಿಣೆ ನಿಷೇಧ ಅಧಿಕಾರಿಯ ಮುಂದೆ ಖುದ್ದಾಗಿ ಹಾಜರಾಗಲು ನಿಮ್ಮನ್ನು ಅಗತ್ಯಪಡಿಸಲಾಗಿದೆ.

ದಿನಾಂಕ ––––– ದಿನದ ––––––––200 ವಧು ವರದಕ್ಷಿಣೆ ನಿಷೇಧ ಅಧಿಕಾರಿ

(ಕಚೇರಿ ಮೊಹರು)

## ನಮೂನೆ – IV

**(ನಿಯಮ 9 ಉಪನಿಯಮ (2) ನೋಡಿ)**

**ಕ್ಷೇಮಾಭಿವೃದ್ಧಿ ಸಂಸ್ಥೆ / ಸಂಘಟನೆಗಳ ಮಾನ್ಯತೆಗೆ ಅರ್ಜಿ ನಮೂನೆ**

1. ಕ್ಷೇಮಾಭಿವೃದ್ಧಿ ಸಂಸ್ಥೆಗಳು/ ಸಂಘಟನೆಯ ಹೆಸರು
2. ಪೂರ್ಣ ವಿಳಾಸ
3. ಗುರಿಗಳು ಮತ್ತು ಧ್ಯೇಯೋದ್ದೇಶಗಳು
4. ಸಂಸ್ಥೆ/ ಸಂಘಟನೆಯ ಮುಖ್ಯಸ್ಥರ ಹೆಸರು ಮತ್ತು ವಿಳಾಸ
5. ಅದರ ಕಾರ್ಯಚಟುವಟಿಕೆಗಳ ಸಂಕ್ಷಿಪ್ತ ವಿವರಣೆ
6. ಮಾನ್ಯತೆ ಕೋರಿರುವ ಸಂಸ್ಥೆ
7. ಈ ಮೊದಲು ಇಂಥ ಅರ್ಜಿಯನ್ನು ಸಲ್ಲಿಸಲಾಗಿತ್ತೆ, ಹಾಗಿದ್ದರೆ, ಅದರ ಪರಿಣಾಮವನ್ನು ದಿನಾಂಕ, ತಿಂಗಳು ಮತ್ತು ವರ್ಷಗಳ ಸಹಿತ ತಿಳಿಸಿ
8. ಯಾವುದೇ ಇತರ ವಿವರಗಳು :

   ಲಗತ್ತಗಳು:

   (1)

   (2)

   (3)

ಸ್ಥಳ :

ದಿನಾಂಕ: ಕ್ಷೇಮಾಭಿವೃದ್ಧಿ ಸಂಸ್ಥೆ / ಸಂಘಟನೆಯ

ಮುಖ್ಯಸ್ಥರ ಸಹಿ

**ನಮೂನೆ –V**

**(ನಿಯಮ 9 ಉಪನಿಯಮ (4) ನೋಡಿ)**

**ಮಾನ್ಯತಾ ಪ್ರಮಾಣ ಪತ್ರದ ನವೀಕರಣಕ್ಕಾಗಿ ಅರ್ಜಿ ನಮೂನೆ**

1. ಕ್ಷೇಮಾಭಿವೃದ್ಧಿ ಸಂಸ್ಥೆಗಳು / ಸಂಘಟನೆಯ ಹೆಸರು
2. ಪೂರ್ಣ ವಿಳಾಸ
3. ಕಳೆದ ಐದು ವರ್ಷಗಳಲ್ಲಿ ಮಾಡಿದ ಸಾಧನೆಗಳ ಸಂಕ್ಷಿಪ್ತ ವಿವರ
4. ಸಂಸ್ಥೆ, ಸಂಘಟನೆಯ ಮುಖ್ಯಸ್ಥರ ಹೆಸರು ಮತ್ತು ವಿಳಾಸ
5. ಪ್ರಮಾಣಪತ್ರ ಸಂಖ್ಯೆ, ದಿನಾಂಕ ಮತ್ತು ಮುಕ್ತಾಯಗೊಂಡ ದಿನಾಂಕ
6. ಇತರ ಯಾವುವೇ ವಿವರಗಳು

ಸ್ಥಳ:

ದಿನಾಂಕ : ಕ್ಷೇಮಾಭಿವೃದ್ಧಿ ಸಂಸ್ಥೆ / ಸಂಘಟನೆಯ ಮುಖ್ಯಸ್ಥರ ಸಹಿ.

**ಕರ್ನಾಟಕ ಸರ್ಕಾರ**

ಸಂ. ಡಬ್ಲ್ಯೂಸಿಡಿ 39 ಎಸ್‌ಡಬ್ಲ್ಯೂಡಬ್ಲ್ಯೂ2004

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ 17.04.2004

**ಅಧಿಸೂಚನೆ**

ವಧು ವರದಕ್ಷಿಣೆ ನಿಷೇಧ (ಕರ್ನಾಟಕ) ನಿಯಮಗಳು, 2004ರ 6ನೇ ನಿಯಮದ (1)ನೇ ಉಪನಿಯಮದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ನಿರ್ದೇಶಕರು, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರನ್ನು ಮುಖ್ಯ ವಧು ವರದಕ್ಷಿಣೆ ನಿಷೇಧ ಅಧಿಕಾರಿಯಾಗಿ ನೇಮಕ ಮಾಡಿದೆ.

ಸರ್ಕಾರಿ ಅಧಿಸೂಚನೆ ಸಂ. ಎಸ್‌ಡಬ್ಲ್ಯೂಎಲ್ 166 ಎಸ್ ಡಬ್ಲ್ಯೂಡಬ್ಲ್ಯೂ 86, ದಿನಾಂಕ 8.12.1987ನ್ನು ರದ್ದುಗೊಳಿಸಿ, ಮತ್ತು ವಧು ವರದಕ್ಷಿಣೆ ನಿಷೇಧ (ಕರ್ನಾಟಕ) ನಿಯಮಗಳು, 2004ರ ನಿಯಮ 3ರ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕರನ್ನು/ ಉಪ ನಿರ್ದೇಶಕರನ್ನು ಅವರ ಸಂಬಂಧಪಟ್ಟ ಜಿಲ್ಲೆಗಳ ವಧು ವರದಕ್ಷಿಣೆ ನಿಷೇಧ ಅಧಿಕಾರಿಗಳಾಗಿ ಮತ್ತು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಕ್ಕಳ ಅಭಿವೃದ್ಧಿ ಯೋಜನಾ ಅಧಿಕಾರಿಗಳನ್ನು ಮತ್ತು ಕಂದಾಯ ಇಲಾಖೆಯ ತಹಸೀಲ್ದಾರರನ್ನು ಅವರಿಗೆ ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯ ಹೆಚ್ಚುವರಿ ವಧು ವರದಕ್ಷಿಣೆ ನಿಷೇಧ ಅಧಿಕಾರಿಗಳಾಗಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
**ಆರ್.ಎಂ. ಚಂದ್ರಮ್ಮ**
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

The above translation of the Dowry Prohibition (Karnataka) Rules, 2004 shall be authoritative text in the Kannada Language under section 5A of the Karnataka Official Language Act, 1963.

GOVERNOR OF KARNATAKA
ಭಾರತದ ರಾಷ್ಟ್ರಪತಿಯವರ ಆದೇಶಾನುಸಾರ ಮತ್ತು ಅವರ
ಹೆಸರಿನಲ್ಲಿ **ಜಿ.ಕೆ. ಬೋರೇಗೌಡ**
ಪಿ.ಆರ್. 110 ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

## LAW, JUSTICE & HUMAN RIGHTS SECRETARIAT

**NOTIFICATION-I No:LAW 288 LCE 2007, Bangalore, Dated: 2nd April 2008**

In exercise of the powers conferred by the proviso sub-section (1) of section 6 read with sub-section (1) of section 10 and sub-section (1) of section 13 of the Karnataka Civil Courts Act, 1964 (Karnataka Act 21 of 1964), the Government of Karnataka, in consultation with the High Court of Karnataka hereby establishers, with effect from the date the presiding Officer assumes the charge of the post, a Court of Civil Judge (Senior Division) at Belur in Hassan District, and fixes Belur as the place at which the said Court of Civil Judge (Senior Division) shall be held and also fixes the local limits of the jurisdiction of the said court to be the area within the local limits of the revenue taluk of Belur in Hassan District.

By order and in the name of the President of India
**E. SHIVANANDA**
Under Secretary to Government, (Admn-1)
Law, Justice & Human Rights Department

**NOTIFICATION-II No:LAW 288 LCE 2007, Bangalore, Dated: 2nd April 2008**

In exercise of the powers conferred by the proviso sub-section (1) and sub-section (3) of section 11 of the Code of Criminal Procedure, 1973 (Central Act 2 of 1974) the Government of Karnataka in consultation with the High Court of Karnataka, hereby establishes, with effect from the date, the presiding Officer assumes charge of the post, a Court of Civil Judge (Senior Division) and Judicial Magistrate First Class at Belur in Hassan District.

By order and in the name of the President of India
**E. SHIVANANDA**
Under Secretary to Government, (Admn-1)
Law, Justice & Human Rights Department

**NOTIFICATION-III No:LAW 288 LCE 2007, Bangalore, Dated: 2nd April 2008**

In exercise of the powers conferred by the proviso sub-section (1) of section 13 of the Karnataka Civil Courts, Act, 1964 (Karnataka Act 21 of 1964) and in partial modification of the notifications issued earlier in this, behalf, the Government of Karnataka, in consultation with the High Court of Karnataka hereby varies with effect from the date, the Presiding Officer assumes charge of the post of Civil Judge (Senior Division), Belur, the local limits of the Jurisdiction of the court of principal Civil Judge (Senior Division) and Chief Judicial Magistrate, Hassan and Additional Civil Judge (Senior Division), Hassan by excluding the revenue taluk of Belur from the jurisdiction of the said courts.

By order and in the name of the President of India

**E. SHIVANANDA**

Under Secretary to Government, (Admn-1)

Law, Justice & Human Rights Department

**NOTIFICATION-IV No:LAW 288 LCE 2007, Bangalore, Dated: 2nd April 2008**

In exercise of the powers conferred by the Section 8 of The Karnataka Civil Courts Act, 1964 (Karnataka Act 21of 1964) the Government of Karnataka in consultation with the High Court of Karnataka, hereby fixes with effect from the date the presiding Officer assumes the charge of he post of Civil Judge (senior Division) and Judicial Magistrate First Class,Belur, the number of Civil Judge (senior Division) to be appointed to the court of Civil Judge (Senior Division) and Judicial Magistrate First Class, Belur in Hassan District to be ONE;

By order and in the name of the President of India

P.R. 108

**E. SHIVANANDA**

Under Secretary to Government, (Admn-1)

Law, Justice & Human Rights Department